**ಸಿ.ಸಿ. 4/2024**
ಪಿ.ಡಬ್ಲೂ.-1

ದಿನಾಕಃ 24.10.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಶ್ರೀ ಕೆ.ಸಿ.ಆರ್ ವಕೀಲರಿಂದಃ**

ಇಟ್ಟಿಗೆ ಫ್ಯಾಕ್ಟರಿ ಕಟ್ಟಲು ಹಣವನ್ನು ನೀಡಿರುತ್ತೇನೆಂದು ನಾನು ಹೇಳಿದ್ದು, ಸದರಿ ಫ್ಯಾಕ್ಟರಿ ಯಾವ ಊರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಇಟ್ಟಿಗೆ ಫ್ಯಾಕ್ಟರಿ ನಡೆಯುವ ಜಾಗವನ್ನು ಖುದ್ದಾಗಿ ನಾನು ಹೋಗಿ ನೋಡಿರಿವುದಿಲ್ಲ. ನಾನು ವಾಸ ಮಾಡುವ ಊರಿಗೆ ಆರೋಪಿ ವಾಸ ಮಾಡುವ ಊರಿಗೂ 7 ಕಿ.ಮೀ ಅಂತರ ಇರುತ್ತದೆ. ನಾನು ಮಾಡುವಂತಹ ವ್ಯವಹಾರ ಬಿಳಿಕೆರೆ ಮಾತ್ರ ಸಿಮೀತವಾಗಿರುತ್ತದೆಂದರೆ ಸಾಕ್ಷಿ ಇಲ್ಲ ಬೇರೆ ಕಡೆ ನಾನು ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತೇನೆಂದು ನುಡಿಯುತ್ತಾರೆ. ನಿಮಗೆ ಆರೋಪಿ ಹೇಗೆ ಪರಿಚಯ ಎಂದರೆ ಸಾಕ್ಷಿ ಖಾತೆ ಮಾಡಿಸಲು ಅವರ ಉೂರಿಗೆ ಹೋಗಿ ಬಂದು ಮಾಡುತ್ತಿದ್ದು, ಆ ಸಮಯದಲ್ಲಿ ಆರೋಪಿ ಪರಿಚಯವಾಗಿರುತ್ತಾರೆ. ಯಾವ ಆಸ್ತಿಗೆ ಸಂಬಂಧಿಸಿದಂತಹ ಖಾತೆ ಮಾಡಿಸಲು ಗ್ರಾಮ ಪಂಚಾಯಿತಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಬೊಮ್ಮೇನಹಳ್ಳಿ ಗ್ರಾಮದ ಲಿಂಗಯ್ಯ, ಸಣ್ಣಮ್ಮರವರ ಸ್ವತ್ತು ಖಾತೆ ಮಾಡಿಸುವ ಸಲುವಾಗಿ. ಯಾವ ವಿಚಾರವಾಗಿ ಆರೋಪಿ ಪರಿಚಯವಾದರೂ ಎಂದರೆ ಸಾಕ್ಷಿ ಸೈಟ್ ಗಳನ್ನು ತೋರಿಸುವ ವ್ಯವಹಾರ ಮಾಡುವಾಗ ಪರಿಚಯವಾಗಿದ್ದರು. ನಾನು ರಿಯಲ್ ಎಸ್ಟೇಟ್ ಮಾಡುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ನಾನು, ಹೆಂಡತಿ, ಅಕ್ಕ, ಮಗು ಮತ್ತು ತಾಯಿ ಇರುತ್ತೇವೆ. ಸದರಿ ಎಲ್ಲಾರ ಜೀವನದ ನಿರ್ವಹಣೆ ನನ್ನದೇ ಆಗಿರುತ್ತದೆಂದರೆ ಸಾಕ್ಷಿ ಸಾಕ್ಷಿ ನನ್ನ ತಾಯಿಯೂ ಸಹ ನನ್ನೊಂದಿಗೆ ನಿರ್ವಹಿಸುತ್ತಾರೆ. ನಮ್ಮ ಮನೆಗೆ ಸಂಬಂಧಿಸಿದ ಬಿ.ಪಿ.ಎಲ್ ರೇಶನ್ ಕಾರ್ಡ ಇರುತ್ತದೆಂದರೆ ಸರಿ. ನಮ್ಮ ತಾಯಿಯ ಹೆಸರಿನಲ್ಲಿದ್ದು, ನನ್ನ ಹೆಸರು ಸಹ ಒಳಪಟ್ಟಿರುತ್ತದೆ.ಸದರಿ ರೇಶನ್ ಕಾರ್ಡದಿಂದ ಸರ್ಕಾರದಿಂದ ಬರುವಂತಹ ಸೌಲಭ್ಯವನ್ನು ಪಡೆಯುತ್ತೇನೆಂದರೆ ಸರಿ. ನನಗೆ ಒಂದು ವರ್ಷದ ಆದಾಯದ ಮೂಲ ಏನು ಎಂದರೆ ಸಾಕ್ಷಿ 4 ಎಕರೆ ಜಮೀನು ಅದರಲ್ಲಿ ಕೃಷ್ಟಿ ಮಾಡಿಸುತ್ತೇನೆ ಮತ್ತು ಇತರೆ ವ್ಯವಹಾರಗಳಾದ ಸೈಟ್ ಗೆ ಸಂಬಂಧಿಸಿದ ಕೆಲಸವನ್ನು ಮಾಡುತ್ತೇನೆ. ಸದರಿ ಜಮೀನು ಬಿಳಿಕೆರೆಯ ಸಬ್ಬನಹಳ್ಳಿ ವ್ಯಾಪ್ತಿಯಲ್ಲಿ ಇರುತ್ತದೆ. ಸದರಿ ಜಮೀನು ನನ್ನ, ತಾಯಿ ಹಾಗೂ ಅಕ್ಕನವರ ಹೆಸರಿನಲ್ಲಿ ಜಂಟಿ ಇರುತ್ತದೆ. ನನ್ನ ತಂದೆ

ತಾಯಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ನಾನು ಒಬ್ಬ ಐದು ಜನ ಮಕ್ಕಳು ಇರುತ್ತೇವೆ. ಅಕ್ಕ-ತಂಗಿಯರ ಪ್ರತ್ಯೇಕವಾಗಿ ವಾಸಿಸುತ್ತಿದೇವೆ. ಸದರಿ ಜಮೀನು ನಮ್ಮ ಅಕ್ಕ-ತಂಗಿಯರಿಗೆ ಮತ್ತು ತಾಯಿಗೂ ಹಕ್ಕು ಇರುತ್ತದೆಂದರೆ ಸರಿ. ಸದರಿ ಜಮೀನು ವಿಭಾಗ ಆಗಿರುವುದಿಲ್ಲ. ನಾಲ್ಕು ಎಕರೆ ಸ.ನಂ.43/9 ಪಿಪಿ. ಸದರಿ ಜಮೀನಿನ ಮೇಲೆ ಬ್ಯಾಂಕಿನಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ. ಸದರಿ ಜಮೀನು ಮಳೆ ಆಧಾರದ ಜಮೀನು ಆಗಿರುತ್ತದೆ. ಸದರಿ ಜಮೀನಿನಲ್ಲಿ ಹೊಗೆ ಸೊಪ್ಪು, ರಾಗಿ, ಹುರುಳಿ, ಶುಂಠಿ ಬೆಳಗಳನ್ನು ಬೆಳೆಯುತ್ತೇವೆ. ಹೊಗೆ ಸೊಪ್ಪು ಹದ ಮಾಡುವ ಪರವಾನಿಗೆ ಇರುವುದಿಲ್ಲ. ವರ್ಷಕ್ಕೆ ಎಷ್ಟು ಬೆಳೆಗಳನ್ನು ಬೆಳೆಯುತ್ತೀರಾ ಎಂದರೆ ಸಾಕ್ಷಿ ನಾವು ಖುದ್ದಾಗಿ ಬೆಳೆಯುವುದಿಲ್ಲ ಬೇರೆಯವರಿಗೆ ನೀಡಿ ಕೃಷಿ ಮಾಡಿಸುತ್ತೇವೆಂದು ನುಡಿಯುತ್ತಾರೆ. ವರ್ಷಕ್ಕೆ ಒಂದು ಎಕರೆಗೆ 25,000/- ರೂ.ಗಳಂತೆ ಕೃಷಿ ಮಾಡಲು ನೀಡಿರುತ್ತೇನೆ. 2022-23 ರಲ್ಲಿ ಗುತ್ತಿಗೆ ಆಧಾರದ ಮೇಲೆ ಸದರಿ ಜಮೀನಿನ ಮೇಲೆ 2 ವರ್ಷದ ಅವಧಿಗೆ ಸುಮಾರು 2 ಲಕ್ಷ ರೂ.ಗಳು ಬಂದಿರುತ್ತದೆ. ತಿಂಗಳಿಗೆ 3-4 ಸಾವಿರ ನಮ್ಮ ಕುಟುಂಬದ ನಿರ್ವಹಣೆ ಖರ್ಚು ಬರುತ್ತದೆ. ಜಮೀನಿನಿಂದ ಬರುವಂತಹ ಆಧಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಆಧಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಸೈಟ್ ತೋರಿಸುವಂತಹ ವ್ಯವಹಾರದಲ್ಲಿ 1%, 2% ಹಣ ಬರುತ್ತದೆ. ಸದರಿ ಹಣವನ್ನು ನಗದು ರೂಪದಲ್ಲಿ ನನ್ನ ಕಮಿಷನ್ ಹಣವನ್ನು ಪಡೆಯುತ್ತೇನೆ. ನಾನು ಸೈಟ್ ತೋರಿಸುವ ಕೆಲಸ ನಿರ್ವಹಿಸುತ್ತಿದ್ದರೆ, ಸಾಮಾನ್ಯವಾಗಿ ಕ್ರಯ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುತ್ತಾರೆಂದರೆ ಸಾಕ್ಷಿ ನಾನು ಯಾವುದೇ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಸಂಬಂಧಿಸಿದ ಬಿಳಿಕೆರೆ ಶಾಖೆಯ ಎಸ್.ಬಿ.ಐ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ಸುಮಾರು 4-5 ವರ್ಷದಿಂದ ಸದರಿ ಖಾತೆಯನ್ನು ಹೊಂದಿರುತ್ತೇನೆ. 2022-23 ರಲ್ಲಿ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ 3 ಲಕ್ಷ ಎಂದು ನುಡಿಯುತ್ತಾರೆ. ಸದರಿ ಹಣ ಯಾವ ತಿಂಗಳಿನಲ್ಲಿ ಇತ್ತು ಎಂದು ನೆನಪಿಲ್ಲ. ಬೇರೆಯವರಿಗೆ ಹಣ ನೀಡುವ ಸಮಯದಲ್ಲಿ ಚೆಕ್ ಮೂಲಕ ಆನ್ ಲೈನ್ ಮೂಲಕ ಹಣ ನೀಡುವ ಅಭ್ಯಾಸ ಇರುವುದಿಲ್ಲ.

ಆರೋಪಿ ಹಣ ಬೇಕೆಂದು ಎಲ್ಲಿ ಬಂದು ಕೇಳಿರುತ್ತಾರೆಂದರೆ ಸಾಕ್ಷಿ 26.07.2023 ರಲ್ಲಿ ನಮ್ಮ ಮನೆಯ ಬಂದು ಹಣವನ್ನು ಕೇಳಿರುತ್ತಾರೆ. ಸದರಿ ದಿನದಂದು ಚೆಕ್ ನ್ನು ತಂದಿರುತ್ತಾರೆಂದರೆ ಸಾಕ್ಷಿ ಅದೇ ದಿನ ಚೆಕ್ ನ್ನು ತೆಗೆದುಕೊಂಡು ಬಂದಿರುತ್ತಾರೆ. ಖಾಲಿ ಚೆಕ್ ನ್ನು ಸಹಿ ಮಾಡಿ ನೀಡಿದರಾ

ಎಂದರೆ ಸಾಕ್ಷಿ ನನ್ನ ಎದುರಗಡೆ ಸಹಿ ಮಾಡಿರುತ್ತಾರೆ ಇನ್ನೂಳಿದನ್ನು ಯಾರ ಹತ್ತಿರ ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ದಿಃ26.07.2023 ರ ಪೂರ್ವದಲ್ಲಿ ಆರೋಪಿ ನಿಮ್ಮ ಬೇಟಿ ಯಾವಾಗ ಆಗಿತ್ತು ಎಂದರೆ 15 ದಿನಗಳ ಹಿಂದೆ ಎಂದು ನುಡಿಯುತ್ತಾರೆ. ಆ ದಿವಸ ಯಾವುದೇ ವ್ಯವಹಾರದ ಮಾತುಕತೆ ಆಗಿರುವುದಿಲ್ಲ ಎಂದರೆ ಸಾಕ್ಷಿ ದುಡ್ಡು ಬೇಕೆಂದು ಕೇಳಿರುತ್ತಾರೆಂದು ನುಡಿಯುತ್ತಾರೆ. ಹಣ ಬೇಕು ಎಂದು ಕೇಳಿದ ನಿಖರವಾದ ದಿನಾಂಕ ಯಾವುದು ಎಂದರೆ ದಿಃ26.07.2023, 15 ದಿನಗಳ ಹಿಂದೆಯೇ ಕೇಳಿರುತ್ತಾರೆ. ಅಂದಿನ ದಿನ ಯಾಕೆ ಹಣವನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಇರಲಿಲ್ಲ ಹೊಂದಿಸಿ ಕೊಡುತ್ತೇನೆಂದು ನುಡಿಯುತ್ತಾರೆ. ತದನಂತರದಲ್ಲಿ ಯಾವುದೇ ವ್ಯವಹಾರದ ಮಾತುಕತೆ ಆಗಿರುವುದಿಲ್ಲ ಎಂದರೆ ಸಾಕ್ಷಿ 15 ದಿನಗಳನ್ನು ಬಿಟ್ಟು ಬರುತ್ತೇನೆಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ಸದರಿ 15 ದಿನಗಳ ಅಂತರದಲ್ಲಿ ನಿಮಗೆ ಎಲ್ಲಿಂದ 5 ಲಕ್ಷ ರೂಪಾಯಿಗಳು ಬಂತು ಎಂದರೆ ಸಾಕ್ಷಿ ನಮ್ಮ ಜಮೀನು ಕೃಷಿ ಮಾಡುವವರ ಹತ್ತಿರ 2 ಲಕ್ಷ, ನನ್ನ ಹತ್ತಿರ ಇರುವಂತಹ ಉಳಿದ ಹಣವನ್ನು ನೀಡಿರುತ್ತೇನೆ. ಇನ್ನೂಳಿದ 3 ಲಕ್ಷ ನಿಮ್ಮ ಹತ್ತಿರ ಹೇಗೆ ಬಂತು ಎಂದರೆ ಸಾಕ್ಷಿ ನಾನು ಕೂಡಿಟ್ಟಿದ್ದಹಣವನ್ನು ನೀಡಿರುತ್ತೇನೆ. ದಿಃ26.07.2023 ಪೂರ್ವದ 15 ದಿನಗಳ ಹಿಂದೆ ಆರೋಪಿ ನಿಮ್ಮ ಬಳಿ ಹಣ ಕೇಳಿದಾಗ ನಿಮ್ಮ ಬಳಿ ಎಷ್ಟು ಹಣ ಇತ್ತು ಎಂದರೆ ಸಾಕ್ಷಿ 3 ಲಕ್ಷ ಎಂದು ನುಡಿಯುತ್ತಾರೆ.

ದೊಡ್ಡೆಗೌಡರು ನಮ್ಮ ಬಳಿ ಗುತ್ತಿಗೆ ಮಾಡುತ್ತಿದ್ದವರು 2 ಲಕ್ಷ ನೀಡಿರುತ್ತಾರೆ. ಸದರಿಯವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಜಮೀನನ್ನು ಗುತ್ತಿಗೆ ನೀಡುವ ಸಮಯದಲ್ಲಿ ಯಾವುದೇ ಕರಾರು ಮಾಡಿರುವುದಿಲ್ಲ. ಜಮೀನಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಂಧಿಸಿದಂತಹ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆಧಾಯದ ಮೂಲಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ26.07.2023 ರಂದು ಆರೋಪಿಗೆ ಹಣ ನೀಡಿರುತ್ತೇನೆಂದು ಹೇಳಿದ್ದು, ಸದರಿ ದಿನದಂದು 5 ಲಕ್ಷ ಹಣ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ.

ನರೇಂದ್ರ ನಾಗವಾಲ ಗ್ರಾಮದವರು ನನಗೆ ಗೊತ್ತು ಎಂದರೆ ಸರಿ. ಸದರಿಯವರನ್ನು ಭೇಟಿ ಮಾಡಲು ಸದರಿ ಗ್ರಾಮಕ್ಕೆ ಆಗಾಗ ಹೋಗುತ್ತೇನೆಂದರೆ ಸಾಕ್ಷಿ ಸದರಿ ಗ್ರಾಮಕ್ಕೆ ಹೋಗುತ್ತೇನೆ ಆ

ಸಮಯದಲ್ಲಿ ಅವರು ಸಿಕ್ಕರೆ ಮಾತನಾಡಿಸುತ್ತೇನೆ. ಇಲವಾಲ ಪೊಲೀಸ್ ಠಾಣೆಯಲ್ಲಿ ನರೇಂದ್ರ ಹಾಗೂ ನನ್ನನ್ನು ಸೇರಿದಂತೆ ಆರೋಪಿ 2 ಕ್ರಿಮಿನಲ್ ಮೊಕ್ಕದ್ದಮೆಯಲ್ಲಿ ದಾಖಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯಾವತ್ತು ಹಣವನ್ನು ಕೇಳಿರುವುದಿಲ್ಲ ನಾನು ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನರೇಂದ್ರ ರವರ ಗುಂಪು ಇದ್ದು ಸದರಿ ಗುಂಪಿನಲ್ಲಿ ಆರೋಪಿ ಒಬ್ಬರು ಎಂದರೆ ನನಗೆ ಗೊತ್ತಿಲ್ಲ. 2022-23 ಸಾಲಿನ ಆರ್ಥಿಕವಾಗಿ ನಾನು ಚೆನ್ನಾಗಿ ಇದ್ದೇನೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಬ್ಯಾಂಕಿನಿಂದ ವ್ಯವಹಾರಗಳನ್ನು ಜಾಸ್ತಿ ಮಾಡದ ಕಾರಣ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ಹಾಗೂ ಅವರ ತಮ್ಮ ಚಂದ್ರಶೇಖರ ಎಂಬ ವ್ಯಕ್ತಿಯೊಂದಿಗೆ ಹಣದ ವ್ಯವಹಾರ ಇಟ್ಟುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಂದ್ರಶೇಖರವರು ಆರೋಪಿ ಸಹಿ ಮಾಡದ ಚೆಕ್ ನ್ನು ಪಡೆದುಕೊಂಡು ಹೋಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಂದ್ರಶೇಖರ ಗೂ ಹಾಗೂ ಆರೋಪಿಯ ನಡುವೆ ಭಿನ್ನಾಪ್ರಾಯ ಬಂದ ಕಾರಣ ಚಂದ್ರಶೇಖರವರು ಆರೋಪಿಗೆ ಸಂಬಂಧಿಸಿದ ಚೆಕ್ ನ್ನು ನನಗೆ ನೀಡಿರುತ್ತಾರೆಂದರೆ ಸರಿಯಲ್ಲ. ನಾನು ಪಿ.ಯು.ಸಿ ಐ.ಟಿ.ಐ ವಿದ್ಯಾಭ್ಯಾಸ ಮಾಡಿರುತ್ತೇನೆ.

ಸಾಕ್ಷಿಗೆ ನಿಪಿ-1 ರಲ್ಲಿರುವ ಸಹಿಯನ್ನು ತೋರಿಸಿದ್ದು ಹಾಗೂ ನಿಪಿ-5 ರಲ್ಲಿರುವ ಸಹಿಗೂ ವ್ಯತ್ಯಾಸ ಇರುತ್ತದೆಂದರೆ ಸಾಕ್ಷಿ ಸ್ವಲ್ಪ ವ್ಯತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲರಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಾನು ಹಣವನ್ನು ನೀಡುವ ಸಮಯದಲ್ಲಿ ಆರೋಪಿಯನ್ನು ಹೊರತುಪಡಿಸಿ ಯಾರೂ ಇರಲಿಲ್ಲ. ಚಂದ್ರಶೇಖರ ಕೊಟ್ಟಿರುವ ಚೆಕ್ ನ್ನು ನಾನು ದುರಪಯೋಗ ಪಡಿಸಿಕೊಂಡು ಈ ಪ್ರಕರಣದಲ್ಲಿ ಅಳವಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಈ ಪಿರ್ಯಾದಿನಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.ದಿ:26.07.2023 ರಂದು ಆರೋಪಿ ಚೆಕ್ ನೀಡಿರುತ್ತಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಗದೀಕರಣ ಮಾಡಲು ತಿಳಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಚೆಕ್ ಚಂದ್ರಶೇಖರ ರವರು ನೀಡಿರುವ ಚೆಕ್ ಎಂದು ನ್ಯಾಯ ಪಂಚಾಯಿತಿ ಆಗಿರುತ್ತದೆಂದರೆ ಸರಿಯಲ್ಲ. ಮುಂದುವರೆದು ನಾನು ಸಲ್ಲಿಸಿರುವ ನೋಟೀಸ್ ಗೂ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ನ್ಯಾಯ ಪಂಚಾಯಿತಿ ಆದಾಗ ನಾನು ಚೆಕ್ ನ್ನು ಹಿಂದುರುಗಿಸಿ

ನೀಡಬಹುದು ಎಂಬ ಉದ್ದೇಶದಿಂದ ಆರೋಪಿ ಯಾವುದೇ ಪ್ರತ್ಯುತ್ತರ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯಿತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು